## ನಿಮ್ಮೊಡನೆ

# ಶೌಚಾಲಯ ಕ್ರಾಂತಿಯ ಜರೂರು

'ಶೌಚಾಲಯಗಳಿಗಿಂತಲೂ ಹಲವು ಪಟ್ಟು ಹೆಚ್ಚು ಮೊಬೈಲ್ ಫೋನ್‌ಗಳನ್ನು ಹೊಂದಿರುವ ದೇಶ ಭಾರತ' ಎಂದು ಸ್ವತಃ ವಿಶ್ವಬ್ಯಾಂಕ್ ಹೇಳಿಕೆ ನೀಡಿದೆ. ನಮ್ಮ ಜನರಿಗೆ ಸ್ವಂತ ಶೌಚಾಲಯ ಹೊಂದುವುದರ ಬಗ್ಗೆ ಏಕಿಷ್ಟು ನಿರ್ಲಕ್ಷ್ಯ?

ಉಪವಾಸ ನಡೆಸಿ ಮನೆಯಲ್ಲಿ ಶೌಚಾಲಯ ನಿರ್ಮಿಸುವ ತನ್ನ ಬೇಡಿಕೆಯನ್ನು ಯುವತಿಯೊಬ್ಬಳು ಈಡೇರಿಸಿಕೊಂಡ ಘಟನೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಢಣಾಪುರದಲ್ಲಿ ನಡೆದಿದೆ. ಮಲ್ಲಮ್ಮ ಸಣ್ಣನಿಂಗಮ್ಮ ಎನ್ನುವ ಹತ್ತನೇ ತರಗತಿಯ ವಿದ್ಯಾರ್ಥಿನಿ, ತನ್ನ ಮನೆಯಲ್ಲಿ ಶೌಚಾಲಯ ಇಲ್ಲದೆಹೋದುದರಿಂದ ಮುಜುಗರಗೊಂಡಿದ್ದಾಳೆ. ಆದರೆ, ಪೋಷಕರು ಮಗಳ ಬೇಡಿಕೆಗೆ ತಲೆ ಕೆಡಿಸಿಕೊಂಡಿಲ್ಲ. ಕೊನೆಗೆ ಮಗಳು ಎರಡು ದಿನ ಉಪವಾಸ ಕೂತಾಗ, ಮಣಿದಿರುವ ಪೋಷಕರು ಶೌಚಾಲಯ ನಿರ್ಮಿಸಲು ಒಪ್ಪಿಕೊಂಡಿದ್ದಾರೆ. ರಾಜ್ಯದ ಅರ್ಧಕ್ಕೂ ಹೆಚ್ಚು ಜನತೆ ಮಲ– ಮೂತ್ರ ವಿಸರ್ಜನೆಗಾಗಿ ಬಯಲನ್ನೇ ಆಶ್ರಯಿಸಿರುವ ಸಂದರ್ಭದಲ್ಲಿ ಗ್ರಾಮೀಣ ಬಾಲಕಿಯ ಅರಿವು ಹಾಗೂ ಹೋರಾಟ ಅಚ್ಚರಿ ಹುಟ್ಟಿಸುವಂತಿದೆ. ಇದೇ ಗಂಗಾವತಿ ತಾಲ್ಲೂಕಿನ ಶ್ರೀರಾಮನಗರ ಗ್ರಾಮ ಪಂಚಾಯತಿ ಅಧ್ಯಕ್ಷ ಶ್ರೀನಿವಾಸ ಕರಟೂರಿ ಅವರು ಇತ್ತೀಚೆಗೆ– 'ನಿಮ್ಮ ಕಾಲಿಗೆ ನಮಸ್ಕಾರ ಮಾಡುವೆ. ದಯಮಾಡಿ ಶೌಚಾಲಯ ಕಟ್ಟಿಸಿಕೊಳ್ಳಿ, ಬಯಲು ಶೌಚಕ್ಕೆ ಹೋಗಬೇಡಿ' ಎಂದು ಬಯಲು ಶೌಚಕ್ಕೆ ತೆರಳುವ ಜನರಲ್ಲಿ ಮನವಿ ಮಾಡಿಕೊಂಡು ಸುದ್ದಿಯಾದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಶೌಚಾಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ನಡೆದಿರುವ ಪ್ರಯತ್ನಗಳು ಸಾಕಷ್ಟು ಸುದ್ದಿ ಮಾಡಿವೆ. ಗ್ರಾಮೀಣ ಪ್ರದೇಶಗಳಲ್ಲಿ ಮನೆಗಳಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಸರ್ಕಾರ ನೆರವು ನೀಡುತ್ತಿದೆ. 'ಸ್ವಚ್ಛ ಭಾರತ್' ಅಭಿಯಾನದಡಿ 2019ರ ವೇಳೆಗೆ ರಾಜ್ಯದಲ್ಲಿ 40 ಲಕ್ಷ ಶೌಚಾಲಯಗಳನ್ನು ರೂಪಿಸಲು ರಾಜ್ಯಸರ್ಕಾರ ಉದ್ದೇಶಿಸಿದ್ದು, 2016–17ರ ಅವಧಿಯಲ್ಲೇ 10.3 ಲಕ್ಷ ಶೌಚಾಲಯಗಳನ್ನು ನಿರ್ಮಿಸುತ್ತಿದೆ. ಅಂಕಿ ಅಂಶಗಳನ್ನು ನೋಡಿದರೆ ಕರ್ನಾಟಕದಲ್ಲಿ 'ಶೌಚಾಲಯ ಕ್ರಾಂತಿ'ಯೇ ನಡೆದಿದೆ ಅನ್ನಿಸುತ್ತದೆ. ಆದರೆ, ಪರಿಸ್ಥಿತಿ ಅಷ್ಟು ಆಶಾದಾಯಕವಾಗಿಯೇನೂ ಇಲ್ಲ. 2015ರ ವೇಳೆಗೆ, ರಾಜ್ಯದ ಶೇ. 4.7 ಗ್ರಾಮ ಪಂಚಾಯತಿಗಳಲ್ಲಷ್ಟೇ ಬಯಲುಮುಕ್ತ ಶೌಚಾಲಯದ ಪರಿಕಲ್ಪನೆ ಸಾಕಾರಗೊಂಡಿದೆ ಎನ್ನುವುದು ನಮ್ಮಲ್ಲಿನ ನೈರ್ಮಲ್ಯಕ್ಕೆ ಕನ್ನಡಿಯಂತಿದೆ.

'ಯುನಿಸೆಫ್' ಅಂಕಿ ಅಂಶಗಳ ಪ್ರಕಾರ, ರಾಜ್ಯದ ಐದು ಜಿಲ್ಲೆಗಳಲ್ಲಷ್ಟೇ ಶೌಚಾಲಯ ವ್ಯವಸ್ಥೆ ತೃಪ್ತಿಕರವಾಗಿದೆ. ಇವುಗಳ ಜೊತೆಗೆ ಮತ್ತೆ ಮೂರು ತಾಲ್ಲೂಕುಗಳಲ್ಲಿ ಸಮಾಧಾನಕರ ಪರಿಸ್ಥಿತಿಯಲ್ಲಿ ಇರುವುದು ಬಿಟ್ಟರೆ, ರಾಜ್ಯದ ಬಹುತೇಕ ಜಿಲ್ಲೆಗಳ ಜನ ಈಗಲೂ ಸುರಕ್ಷಿತ ಹಾಗೂ ಖಾಸಗಿ ಶೌಚಾಲಯ ವ್ಯವಸ್ಥೆಯಿಂದ ವಂಚಿತರಾಗಿದ್ದಾರೆ. ಕಲಬುರಗಿ, ರಾಯಚೂರು, ಬೀದರ್, ಬಳ್ಳಾರಿ, ಯಾದಗಿರಿ, ಕೊಪ್ಪಳ ಜಿಲ್ಲೆಗಳು ಶೌಚಾಲಯದ ನಿಟ್ಟಿನಲ್ಲೂ ಅಭಿವೃದ್ಧಿ ವಂಚಿತ ಪ್ರದೇಶಗಳೇ ಆಗಿವೆ. ಗ್ರಾಮೀಣ ಪ್ರದೇಶಗಳ ಜನತೆಯಲ್ಲಿ ಶೌಚಾಲಯದ ಅಗತ್ಯದ ಕುರಿತು ಸಮರ್ಪಕ ತಿಳಿವಳಿಕೆ ಕೂಡಾ ಇಲ್ಲ. ಕೆಲವೆಡೆ ಸರ್ಕಾರಿ ನೆರವಿನಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗಿದ್ದರೂ, ಅವುಗಳು ಪಳೆಯುಳಿಕೆಗಳಾಗಿ ಉಳಿದಿದ್ದು ಜನರ ವಿಸರ್ಜನೆಗಾಗಿ ಬಯಲನ್ನೇ ಅವಲಂಬಿಸಿದ್ದಾರೆ. 2014–15ರ ಸಾಲಿನಲ್ಲಿ ದೇಶದ ವಿವಿಧೆಡೆಗಳಲ್ಲಿ ಸುಮಾರು 95 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಆದರೆ, ಇವುಗಳಲ್ಲಿ ಶೇ. 45 ಶೌಚಾಲಯಗಳಷ್ಟೇ ಬಳಕೆಯಾಗುತ್ತಿವೆ ಎನ್ನುವುದು ದೇಶದಲ್ಲಿನ ಶೌಚವ್ಯವಸ್ಥೆಯ ಅಧ್ವಾನಕ್ಕೆ ಉದಾಹರಣೆಯಾಗಿದೆ.

ದಕ್ಷಿಣ ಏಷ್ಯಾದ ಎಂಟು ದೇಶಗಳಲ್ಲಿ ಶೌಚಾಲಯ ವ್ಯವಸ್ಥೆ ಹೊಂದಿರುವ ದೇಶಗಳಲ್ಲಿ ಭಾರತದ್ದು ಏಳನೇ ಸ್ಥಾನ. ಬಾಂಗ್ಲಾದಂಥ ಬಡದೇಶ ಬಯಲುಮುಕ್ತ ಶೌಚಾಲಯ ಹೊಂದಿರುವ ದೇಶವಾಗಿ ಗುರ್ತಿಸಿಕೊಂಡಿದ್ದರೆ, ಭಾರತದಲ್ಲಿ ಈಗಲೂ ಶೇ. 60ಕ್ಕೂ ಹೆಚ್ಚು ಜನರು ಮಲ– ಮೂತ್ರ ವಿಸರ್ಜನೆಗಾಗಿ ಬಯಲನ್ನು ಆಶ್ರಯಿಸಿದ್ದಾರೆ. ಈ ನಿಟ್ಟಿನಲ್ಲಿ 'ಶೌಚಾಲಯಗಳಿಗಿಂತಲೂ ಹಲವು ಪಟ್ಟು ಹೆಚ್ಚು ಮೊಬೈಲ್ ಫೋನ್‌ಗಳನ್ನು ಹೊಂದಿರುವ ದೇಶ ಭಾರತ' ಎನ್ನುವ ವಿಶ್ವಬ್ಯಾಂಕ್ ಹೇಳಿಕೆಯಲ್ಲಿರುವ ವ್ಯಂಗ್ಯವನ್ನು ಗಮನಿಸಬೇಕು.

ಮನೆಯಲ್ಲಿ ಶೌಚಾಲಯ ಇಲ್ಲದೆ ಹೋದಲ್ಲಿ ಹೆಚ್ಚು ತೊಂದರೆಗೆ ಒಳಗಾಗುವುದು ಮಹಿಳೆಯರು. ಮನೆಯಿಂದ ದೂರದ ಬಯಲಿಗೆ ತಂಬಿಗೆ ಹಿಡಿದುಕೊಂಡು ಹೋಗುವ ಮುಜುಗರ ಹಾಗೂ ಸಂಕಟವನ್ನು ಅನುಭವಿಸಿದವರೇ ಬಲ್ಲರು. (ಕಳೆದ ವರ್ಷ ಬಯಲು ಶೌಚಕ್ಕೆ ಹೋಗಲು ಮುಜುಗರಪಟ್ಟುಕೊಂಡ ಜಾರ್ಖಂಡ್‌ನ ಯುವತಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಳು.) ಕೆಲವು ಹೆಣ್ಣುಮಕ್ಕಳು ಬಯಲಿಗೆ ಹೋಗಲು ಕತ್ತಲಿಗೆ ಕಾಯುವುದೂ ಇದೆ. ಊರುಕೇರಿ ಬಡಾವಣೆಗಳು ವಿಸ್ತಾರಗೊಂಡಂತೆಲ್ಲ ವಿಸರ್ಜನಾ ಬಯಲುಗಳ ಜಾಗವೂ ಕ್ಷೀಣಿಸುತ್ತಿದೆ. ಇಂಥ ಸಂದರ್ಭದಲ್ಲಿ ಊರಿನಿಂದ ದೂರಕ್ಕೆ ಹೋಗುವುದು ಸುರಕ್ಷತೆಯ ದೃಷ್ಟಿಯಿಂದಲೂ ಆತಂಕ ಹುಟ್ಟಿಸುವ ಸಂಗತಿ.

ಕೆಲವರು ಬಿಂಬಿಸುವಂತೆ ಶೌಚಾಲಯ ಹೊಂದುವುದು ಹೆಮ್ಮೆಯ ಸಂಗತಿಯೂ ಅಲ್ಲ, ಅದು ಸಂಸ್ಕೃತಿಯ ಪ್ರತೀಕವೂ ಅಲ್ಲ. ಕುಡಿಯುವ ನೀರಿನಂತೆ ಶೌಚಾಲಯವನ್ನು ಹೊಂದುವುದು ಕೂಡ ನಾಗರಿಕರ ಮೂಲಭೂತ ಹಕ್ಕು. ಈ ನಿಟ್ಟಿನಲ್ಲಿ ಕೊಪ್ಪಳದ ಮಲ್ಲವ್ವ ನಮ್ಮ ಎಲ್ಲ ಹೆಣ್ಣುಮಕ್ಕಳಿಗೆ ಮಾದರಿಯಾಗಬೇಕು. 'ಶೌಚಾಲಯ ಕ್ರಾಂತಿ' ಎನ್ನುವುದು ಹೆಣ್ಣುಮಕ್ಕಳ ಮೂಲಕ ಮನೆಮನೆಯೊಳಗೂ ಜರೂರಾಗಿ ಘಟಿಸಬೇಕಾಗಿದೆ.

■ ರಘುನಾಥ ಚ.ಹ.



ಈಶ್ವರ್